International Journal of Kannada Research 2016; 2(3): 38-40

International Journal of Kannada Research
www.kannadajournal.com

ISSN: 2454–5813
IJSR 2016; 2(3): 38-40
© 2016 IJKS
www.kannadajournal.com
Received: 16-04-2016
Accepted: 08-05-2016

**Prof. Sunanda Narasingarao**
House No: 10-3/89,
Vittal Nagar, 5th Cross,
Kalaburagi, Karnataka-585103.

**Correspondence**
**Prof. Sunanda Narasingarao**
House No: 10-3/89,
Vittal Nagar, 5th Cross,
Kalaburagi, Karnataka-585103.

# ಹಿಂದೂಸ್ಥಾನಿ ಸಂಗಿತದಲ್ಲಿ ರಾಗಗಳ ಸಮಯ ವಿಭಜನೆ

**Prof. Sunanda Narasingarao**

ನಾವು ಇತಿಹಾಸವನ್ನು ನೋಡಿದಾಗ ನಮ್ಮ ಪುರಾತನ ಸಂಗೀತ ವಿದ್ವಾಂಸರು ತಮ್ಮ ಅನುಭವ ಹಾಗೂ ಮನೋವೈಜ್ಞಾನಿಕ ಆಧಾರದಿಂದ ರಾಗಗಳನ್ನು ಪ್ರಾತಗೇಯ, ದಿನಗೇಯ, ಸಾಯಂಗೇಯ ಹಾಗೂ ರಾತ್ರಿಗೇಯ ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದಲ್ಲಿ ಬರುವ ರಾಗಗಳನ್ನು ಹಾಡುವಾಗ, ನಿಶ್ಚಿತ ವೇಳೆಯಲ್ಲಿಯೇ ಹಾಡಬೇಕೆಂದು ನಿಯಮವನ್ನು ಬಹಳ ಹಿಂದಿನಿಂದಲೂ ಪಾಲಿಸಿಕೊಂಡು ಬಂದಿದ್ದಾರೆ. ಬೇರೆ ಬೇರೆ ರಾಗಗಳನ್ನು ಇದೇ ಸಮಯದಲ್ಲಿ ಹಾಡಿದರೆ, ವಿಶಿಷ್ಟವಾದ ಆನಂದ ದೊರಕುತ್ತದೆ ಎನ್ನುವುದು ಎಲ್ಲರ ಅಭಿಪ್ರಾಯ. ಇಂಥ ರಾಗವನ್ನು ಇಂಥ ವೇಳೆಗೆ ಹಾಡಬೇಕೆಂಬುದೇ ಇದಕ್ಕೆ ಕಾರಣವಾಗಿದೆ. ಪ್ರತಿಯೊಂದು ರಾಗಗಕ್ಕೂ ಒಂದು ಹಾಡತಕ್ಕ ಸಮಯ ನಿರ್ಬಂಧನೆಯಿದ್ದು ಅದು ರಾಗಗಳಲ್ಲಿಯ ವಾದಿ, ಸಂವಾದಿ ಸ್ವರಗಳ ಮೇಲೂ ಶುದ್ಧ, ವಿಕೃತ ಸ್ವರಗಳ ಮೇಲೂ ಅವಲಂಬಿಸಿದೆ.

ರಾಗ ಸಮಯದ ವಿಷಯವಾಗಿ, ಅಪವಾದವೋ ಅಥವಾ ಚರ್ಚಾಸ್ಪದ ವಿಷಯವೋ ಆಗಲು ಸಾಧ್ಯವಾಗಿದೆ. ಆದರೆ ಯಾವುದೇ ವಿಷಯವನ್ನು ಪರಿಶೀಲಿಸಿದಾಗ ಅನುಕೂಲ ಹಾಗೂ ಪ್ರತಿಕೂಲವು ಇದ್ದೆ ಇರುತ್ತದೆ. ಪ್ರೊ..ಎ.ಯು. ಪಾಟೀಲ್ ಅವರು ತಮ್ಮ "ಸಂಗೀತ ದರ್ಪಣ" ಗ್ರಂಥದಲ್ಲಿ ಸಂಗೀತದಲ್ಲಿ ರಾಗಗಳ ವಿಭಜನೆಯನ್ನು ಕುರಿತು ಈ ರೀತಿ ಹೇಳುತ್ತಾರೆ. 'ಸ್ಥೂಲಮಾನವಾಗಿ ರಾಗಗಳನ್ನು ಹಾಡತಕ್ಕ ಸಮಯವನ್ನು ದಿನದ 24 ಘಂಟೆಗಳಲ್ಲಿ ಎರಡು ಭಾಗಗಳನ್ನಾಗಿ ಮಾಡಿ ಹಂಚಿದ್ದಾರೆ. ದಿನದ ಹನ್ನೆರಡು ಗಂಟೆಯಿಂದ ರಾತ್ರಿಯ ಹನ್ನೆರಡರವರೆಗೆ ರಾಗವನ್ನು ಮೊದಲನೇಯ ಅಥವಾ ಪೂರ್ವ ಭಾಗವೆಂತಲೂ, ರಾತ್ರಿಯ ಹನ್ನೆರಡರಿಂದ ದಿನದ ಹನ್ನೆರಡರವರೆಗಿನ ಭಾಗವನ್ನು ಎರಡನೇಯ ಅಥವಾ ಉತ್ತರ ಭಾಗವೆಂತಲೂ ಕರೆದಿದ್ದಾರೆ. ದಿನದ ಪೂರ್ವಭಾಗದಲ್ಲಿ ಹಾಡತಕ್ಕ ರಾಗಗಳಿಗೆ ಉತ್ತರ ರಾಗಗಳೆಂತಲೂ, ಉತ್ತರ ಭಾಗದಲ್ಲಿ ಹಾಡತಕ್ಕ ರಾಗಗಳಿಗೆ ಉತ್ತರ ರಾಗಗಳೆಂತಲೂ ಕರೆದಿದ್ದಾರೆ. ಇಲ್ಲಿ ರಾಗದಲ್ಲಿಯ ವಾದಿ ಸ್ವರವು ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಯಾವುದೇ ರಾಗಸದಲ್ಲಿಯ ವಾದಿ ಸ್ವರವು ಆ ರಾಗದ ಪೂರ್ವ ಭಾಗದಲ್ಲಿ ಅಂದರೆ "ಸರೆಗಮಪ" ಸ್ವರಗಳಲ್ಲಿ ಯಾವುದಾದರೂ ಒಂದಾಗಿದ್ದಲ್ಲಿ, ಅಂಥ ರಾಗವನ್ನು ದಿನದ ಪೂರ್ವಭಾಗದಲ್ಲಿ ಹಾಡಬೇಕೆಂಬ ನಿರ್ಭಂಧವಿದ್ದು ಅಂಥ ರಾಗವನ್ನು ಪೂರ್ವಾಂಗವಾದಿ ರಾಗವೆಂದು ಕರೆಯುವರು. ವಾದಿ ಸ್ವರವು ರಾಗದ ಉತ್ತರಾಂಗದಲ್ಲಿ ಅಂದರೆ "ಮಪದನಿಸಾ" ಸ್ವರಗಳಲ್ಲಿ ಯಾವುದಾದರೊಂದು ಸ್ವರವಾಗಿದ್ದಲ್ಲಿ ಅದನ್ನು ಉತ್ತರಾಂಗ ವಾದಿ ರಾಗವೆಂದು ಕರೆಯುವರು. ಹಾಗೂ ಅದನ್ನು ದಿನದ ಉತ್ತರಾರ್ಧದಲ್ಲಿ ಹಾಡಬೇಕೆಂಬ ನಿಯಮ. ಈ ಮೊದಲು ಹೇಳಿದಂತೆ ಸರಿಯಾಗಿ ಎರಡು ಭಾಗಗಳಲ್ಲಿ ವಿಂಗಡಿಸಿ ದಿನದ ಎರಡು ಭಾಗಗಳಿಗೂ ವಿಂಗಡಿಸಿ ದಿನದ ಎರಡೂ ಭಾಗಗಳಿಗೂ ಹಾಗೂ ಸಪ್ತಸ್ವರಗಳ ಎರಡೂ ಭಾಗಗಳಿಗೂ ಪರಸ್ಪರ ಹೊಂದಾಣಿಕೆಯನ್ನು ಮಾಡಿದ್ದಾರೆ. ಹೀಗೆ ಸಪ್ತಸ್ವರಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸುವಾಗ ಸಾಮಾನ್ಯವಾಗಿ ಷಡ್ಜದಿಂದ ಮಧ್ಯಮದವರೆಗೆ ಒಂದು ಭಾಗ ಹಾಗೂ ಪಂಚಮದಿಂದ ತಾರ ಷಡ್ಜದವರೆಗೆ ಒಂದು ಭಾಗ ಹೀಗೆ ಎರಡು ಭಾಗ ಮಾಡಬಹುದು.

ಪಂ.ಭಾತಖಂಡೆಯವರ ಪ್ರಕಾರ ಹೇಳುವುದಾದರೆ ಸಪ್ತಸ್ವರಗಳನ್ನು ಷಡ್ಜದಿಂದ ಪಂಚಮದವರೆಗೆ ಮತ್ತು ಮಧ್ಯಮದಿಂದ ತಾರ ಷಡ್ಜದವರೆಗೆ ಹೀಗೆ ಎರಡೂ ಭಾಗಗಳಲ್ಲಿ ವಿಂಗಡಿಸುವುದು ಸರಿಯಾದ ಕ್ರಮ ಎನಿಸುವುದು. ಇದರಿಂದ ಷಡ್ಜ, ಪಂಚಮ ಸ್ವರಗಳು ಎರಡೂ ಭಾಗಗಳಲ್ಲಿ ಕಾಣಿಸಿಕೊಳ್ಳುತ್ತವೆ. ಹಾಗೂ ರಾಗದ ನಿಯಮದ ಪ್ರಕಾರ ನೋಡಿದಾಗ ಈ ಎರಡೂ ಸ್ವರಗಳು ಒಂದೇ ಸಮಯಕ್ಕೆ ವರ್ಜಿತವೆನಿಸಿಕೊಳ್ಳಲಾರವು. ಹೀಗಾಗಿ ಕೆಳಗೆ ಕಾಣಿಸಿದಂತೆ ಸಪ್ತ ಸ್ವರಗಳನ್ನು ವಿಭಾಗಿಸಬಹುದು.

ಪೂರ್ವಭಾಗ

| | | |
|---|---|---|
| ಸಾರೆಗ | ಮಪ | ಧನಿಸಾ |

ಉತ್ತರಭಾಗ

ಮೇಲೆ ಕಾಣಿಸುವ ವಿಭಜನೆಯಿಂದ ಎರಡು ಭಾಗಗಳಲ್ಲಿ ಮಧ್ಯಮ ಮತ್ತು ಪಂಚಮ ಸ್ವರಗಳು ಇರುವುದು ಗೋಚರಿಸುತ್ತದೆ. ಈ ರಿತಿಯಾಗಿ ಷಡ್ಜದಿಂದ ಪಂಚಮದವರೆಗಿನ ಸ್ವರಗಳಲ್ಲಿ ಯಾವ ಸ್ವರ ವಾದಿಯಾಗಿರುತ್ತದೋ ಅಂಥಹ ರಾಗಕ್ಕೆ ಪೂರ್ವಾಂಗ ವಾದಿ ರಾಗವೆಂದು ಕರೆಯುತ್ತಾರೆ. ಅದನ್ನು ದಿನದ ಪೂರ್ವಭಾಗದಲ್ಲಿ ಹಾಡಲಾಗುತ್ತದೆ. (ದಿನದ 12 ರಿಂದ ರಾತ್ರಿ 12ರವರೆಗೆ) ಸಪ್ತಕದ ಉತ್ತರಾರ್ಧದಲ್ಲಿ ಮಧ್ಯಮದಿಂದ ತಾರ ಷಡ್ಜದವರೆಗಿನ ಸ್ವರಗಳಲ್ಲಿ ಯಾವುದಾದರೂ ವಾದಿ ಸ್ವರವಾಗಿದ್ದಲ್ಲಿ ಅಂಥಹ ರಾಗವನ್ನು ಉತ್ತರಾಂಗವಾದಿ ಎಂದು ಕರೆಯುತ್ತಾರೆ. ಉದಾಹರಣೆಗಾಗಿ ನಾವು ಯಮನ ರಾಗವನ್ನು ತೆಗೆದುಕೊಂಡರೆ ಯಮನ ರಾಗದ ವಾದಿ ಸ್ವರ ಗಾಂಧಾರವಾಗಿದೆ. ಇದು ಪೂರ್ವ ಭಾಗದಲ್ಲಿ ಬರುವುದುದರಿಂದ ಇದನ್ನು ಬೆಳಗಿನ 12 ರಿಂದ ರಾತ್ರಿಯ 12ರವರೆಗಿನ ಕಾಲಾವಧಿಯಲ್ಲಿ ಹಾಡಲಾಗುತ್ತದೆ. ಬಿಲಾವಲ್ ರಾಗದ ದೈವತವು ವಾದಿ ಸ್ವರವಾಗಿದ್ದು ಉತ್ತರ ಭಾಗದಲ್ಲಿ ಬರುವುದರಿಂದ ಇದನ್ನು ದಿನದ 12 ರಿಂದ ರಾತ್ರಿ 12ರವರೆಗಿನ ಕಾಲದಲ್ಲಿ ಹಾಡಲಾಗುತ್ತದೆ.

ಹಿಂದೂಸ್ಥಾನಿ ಸಂಗೀತ ಶಾಸ್ತ್ರದ ಪ್ರಕಾರ ನಾಲ್ಕು ಸಿದ್ಧಾಂತಗಳ ಆಧಾರದ ಮೇಲೆ ಶಾಸ್ತ್ರಕಾರರು ರಾಗಕ್ಕೂ ಮತ್ತು ಸಮಯಕ್ಕೂ ನಿಶ್ಚಿತ ವೇಳೆಯನ್ನು ನಿಗದಿಪಡಿಸಿದ್ದಾರೆ. ಮೊದಲನೆಯದಾಗಿ ಅರ್ದ್ವದರ್ಶಕ ಸ್ವರದ ಪ್ರಯೋಗದಿಂದ, ಗಾಯನ ಸಮಯದ ನಿಶ್ಚಿತವೇಳೆ, ಎರಡನೇಯದಾಗಿ ವಾದಿ-ಸಂವಾದಿ ಸ್ವರಗಳಿಂದ ಗಾಯನ ಸಮಯದ ನಿಶ್ಚಿತ ವೇಳೆ, ಮೊರನೆಯದಾಗಿ ಪೂರ್ವಾಂಗ ಮತ್ತು ಉತ್ತರಾಂಗದಿಂದ ನಿಶ್ಚಿತ ವೇಳೆ, ನಾಲ್ಕನೇಯದಾಗಿ ರೆ, ಧ ಕೋಮಲ ಸ್ವರ ರೆ,ಧ ಶುದ್ಧ ಸ್ವರ ಹಾಗೂ ಗ,ನಿ ಕೋಮಲ ಸ್ವರಗಳಿಂದ ಗಾಯನ ಸಮಯದ ನಿಶ್ಚಿತ ವೇಳೆ.

ಸಪ್ತಕದಲ್ಲಿ ಬರುವ ಮಧ್ಯಮ ಸ್ವರಕ್ಕೆ ಅರ್ದ್ವದರ್ಶಕ ಸ್ವರ ಎನ್ನುತ್ತಾರೆ. ಹಿಂದೂಸ್ಥಾನಿ ಸಂಗೀತದಲ್ಲಿ ಮಧ್ಯಮ ಸ್ವರಕ್ಕೆ ಬಹಳ ಶ್ರೇಷ್ಠ ಸ್ಥಾನವಿದೆ. ಮಧ್ಯಮ ಸ್ವರದ ಬಳಕೆಯ ವಿವಿಧ ರೀತಿಯಲ್ಲಿ ಗಾಯನ-ವಾದನದಲ್ಲಿ ಆಗುತ್ತದೆ. ಬೆಳಗಿನ ರಾಗಗಳಲ್ಲಿ ಮಧ್ಯಮ ಸಪ್ತಕವು ಶುದ್ಧವಾಗಿರುತ್ತದೆ. ಮಧ್ಯಾಹ್ನದ ನಂತರ ಈ ಸ್ವರವು ತೀವ್ರವಾಗುತ್ತಾ ಹೋಗುತ್ತದೆ. ನಂತರ ರಾತ್ರಿ, ಮಧ್ಯರಾತ್ರಿಯಲ್ಲಿ ಹಾಗೂ ಬೆಳಗಿನ ಜಾವ ಸಂಧೀ ಪ್ರಕಾಶ ರಾಗಗಳಲ್ಲಿ ಮತ್ತು ರಾತ್ರಿಯ ಮೊದಲನೇ ಪ್ರಹಾರದ ರಾಗಗಳಲ್ಲಿ ತೀವ್ರ ಮಧ್ಯಮ ಸ್ವರ ಪ್ರಯೋಗವಾಗುತ್ತದೆ. ಹಾಗೂ ಎರಡೂ ಮಧ್ಯಮಗಳ ಪ್ರಯೋಗ ಕೂಡ ಆಗುತ್ತದೆ. ಹೀಗೆ ಬದಲಾಗುತ್ತಿರುವ ದಿನದ 24 ಗಂಟೆಗಳಲ್ಲಿ ಸಮಯಕ್ಕೆ ತಕ್ಕಂತೆ ಮಧ್ಯಮ ಸ್ವರದ ಪ್ರಯೋಗವು ಬದಲಾಗುತ್ತಿರುವುದು ರಾಗಗಳಲ್ಲಿ ಕಾಣಬಹುದು.

ಪ್ರತಿಯೊಂದು ರಾಗವು ಒಂದೊಂದು ವಿಶಿಷ್ಠ ಭಾವ ರಸವನ್ನು ಪ್ರತಿಪಾದಿಸುತ್ತವೆ. ಈ ಭಾವ ರಸವು ವಿಶೇಷವಾಗಿ ಆ ರಾಗದ ಶುದ್ಧ ಮತ್ತು ವಿಕೃತ ಸ್ವರಗಳನ್ನು ಅವಲಂಬಿಸಿವೆ. ರಾಗಗಳಲ್ಲಿಯ ಸ್ವರಗಳಿಗೂ, ನಿಸರ್ಗದ ಮೂರು ಹೊತ್ತುಗಳಿಗೂ ಹಾಗೂ ನಮ್ಮ ಮನಸ್ಥಿತಿಗೂ ಒಂದು ನಿಕಟವಾದ ಸಂಭಂಧವು ಕಂಡುಬರುತ್ತದೆ. ಬೆಳಗಿನ ಜಾವದಲ್ಲಿ ವಾತಾವರಣವು ಕೋಮಲವಾಗಿದ್ದು ಶಾಂತರಸವನ್ನು, ಸಮಾಧಾನ ಭಾವವನ್ನು ಪ್ರತಿಪಾದಿಸುತ್ತದೆ. ಉದಾಹರಣೆಗಾಗಿ ಬೆಳಗಿನ ರಾಗಗಳಾದ ಬಿಬಾಸ, ಭೈರವ, ಆಸಾವರಿ, ಬಿಲಾವಲ್ ಮುಂತಾದ ರಾಗಗಳು. ದಿನವೆಲ್ಲ ದುಡಿದು ದಣಿದ ದೇಹಕ್ಕೆ, ಮನಸ್ಸಿಗೆ, ರಾತ್ರಿಯ ವಿಶ್ರಾಂತಿಯು ನಮ್ಮ ಮನಸ್ಸಿಗೊಂದು ಕೋಮಲತೆಯನ್ನು ತಂದು ಕೊಡುತ್ತದೆ. ಶಾಂತರಸವನ್ನು ಪ್ರತಿಪಾದಿಸುತ್ತದೆ. ಈ ರೀತಿಯಾಗಿ ಪ್ರಶಾಂತವಾದ ಮನಸ್ಸಿಗೆ, ಬೆಳಗಿನ ಕೋಮಲ ವಾತಾವರಣಕ್ಕೆ ಹೊಂದುವ ಕೋಮಲ ಸ್ವರ ಪ್ರಧಾನವಾದ ರಾಗಗಳನ್ನು ಹಾಡಿದರೆ ಮನಸ್ಸಿಗೆ ಹಿತವನ್ನುಂಟು ಮಾಡುತ್ತದೆ. ಸೂರ್ಯನ ಪ್ರಖರತೆ ಹೆಚ್ಚಾದಂತೆ ಮನಸ್ಸಿನ ಕೋಮಲತೆ ಅಳಿದು ಅದು ರಾಗದಲ್ಲಿಯ ಶುದ್ಧ ಸ್ವರಗಳತ್ತ ಹರಿದು ಶುದ್ಧಸ್ವರ ಪ್ರಧಾನವಾದ ರಾಗಗಳು ಹಾಡುವುದರಿಂದ ಕೇಳುವುದಕ್ಕೆ ಸುಮಧುರವಾಗಿರುತ್ತವೆ. ವಾತಾವರಣವು ಬಲಿತಂತೆ ಶುದ್ಧ ಸ್ವರಗಳು ತೀವ್ರ ಸ್ವರಗಳಾಗಿ ನಮ್ಮ ಮನಸ್ಸು ಸಹ ತೀವ್ರ ಸ್ವರ ಪ್ರಧಾನ ರಾಗಗಳನ್ನು ಕೇಳಿದಾಗ ಆನಂದವಾಗುತ್ತದೆ.

ಮಧ್ಯಾಹ್ನದಲ್ಲಿ ಹಾಡುವ ರಾಗಗಳು ಭೀಮಪಲಾಸ್, ಪಟದೀಪ ಮುಂತಾದವು ರಾತ್ರಿ ಭಾಗೇಶ್ರೀ, ಬಹಾರ, ಬಿಹಾಗ್, ದುರ್ಗಾ ಮುಂತಾದ ರಾಗಗಳು ಹಾಡಲ್ಪಟುತ್ತವೆ. ನಿಸರ್ಗಕ್ಕೂ, ಮಾನವನ ಮನಸ್ಸಿಗೂ ಮತ್ತು ರಾಗಗಳಿಗೂ ಅತ್ಯಂತ ನಿಕಟವಾದ ಸಂಭಂಧವಿರುತ್ತದೆ. ಸಮಯಕ್ಕೆ ಹೊಂದುವ ರಾಗಗಳನ್ನು ಹಾಡುವುದರಿಂದ ರಾಗ ರಸ ಭಾವಕ್ಕೆ ಕಳೆಕಟ್ಟುವುದಲ್ಲದೆ ಅದು ಹೆಚ್ಚು ಪರಿಣಾಮಕಾರಿಯಾಗಿರುವುದು. ಆದರೆ ಕೆಲವೊಂದು ರಾಗಗಳನ್ನು ಪರಾಮರ್ಶಿಸಿದಾಗ ಕೆಲವು ರಾಗಗಳು ಅಪವಾದಾತ್ಮಕವಾಗಿ ತಿಳಿದು ಬರುತ್ತವೆ. ಭೈರವಿ ರಾಗವನ್ನು ಹಾಡುವ ಸಮಯವು ಬೆಳಗಿನ ಜಾವವಾಗಿದೆ. ಆದರೆ ಸಾಮಾನ್ಯವಾಗಿ ಭೈರವಿಯೊಂದಿಗೆ ಸಂಗೀತ ಕಾರ್ಯಕ್ರಮವನ್ನು ಮುಕ್ತಾಯಗೊಳಿಸುವುದು ರೂಢಿಯಲ್ಲಿದೆ. ಹೀಗಾಗಿ ಇದು "ಸಾರ್ವಕಾಲೀಕ" ರಾಗವೆಂದು ಮನ್ನಿಸಿದ್ದಾರೆ. ಹೀಗೆ ಋತುಗಳಲ್ಲಿ ಕೆಲವೊಂದು ರಾಗದ ಸಮಯವು ಸಾರ್ವಕಾಲೀಕ ರಾಗವಾಗಿ ಮಾರ್ಪಾಡುಗೊಳ್ಳುತ್ತವೆ. ಉದಾ: ವಸಂತ ಕಾಲದಲ್ಲಿ ಬಸಂತ ರಾಗವನ್ನು "ಸಾರ್ವಕಾಲೀಕ" ರಾಗವೆಂದು, ಗ್ರೀಷ್ಮ ಋತುವಿನಲ್ಲಿ ಭೈರವ ರಾಗವನ್ನು, ವರ್ಷ ಋತುವಿನಲ್ಲಿ ಮೇಘ ರಾಗವನ್ನು, ಶರದ್ ಋತುವಿನಲ್ಲಿ ಪಂಚಮ, ಹೇಮಂತದಲ್ಲಿ ನಟನಾರಾಯಣ, ಶಿಶಿರದಲ್ಲಿ ಶ್ರೀ ರಾಗಗಳನ್ನು ಸಾರ್ವಕಾಲೀಕ ರಾಗಗಳೆಂದು ಪರಿಗಣಿಸಲಾಗುತ್ತದೆ.

"ಹಿಂದೂಸ್ಥಾನಿ ರಾಗಾಣಾಂ ತ್ರಯೋವರ್ಗಾಃ ಸುನಿಶ್ಚಿತಾ।
ಸ್ವರ ವಿಕೃತಧೀನಾಸ್ತೆ ಲಕ್ಷ್ಯಲಕ್ಷಣ ಕೋವಿದೈಃ॥"

ಎಂಬ "ಶ್ರೀ ಮಲ್ಲಕ್ಷ್ಯ ಸಂಗೀತ"ದ ಅಭಿಪ್ರಾಯವಂತೆ ಸ್ವರ ಮತ್ತು ಸಮಯದ ದೃಷ್ಠಿಯಿಂದ ಹಿಂದೂಸ್ಥಾನಿ ರಾಗಗಳಲ್ಲಿ ಮೂರು ವರ್ಗಗಳನ್ನು ಮಾಡಲಾಗಿದ್ದು. ಈ ವರ್ಗೀಕರಣವು ರಾಗಗಳಲ್ಲಿಯ ಶುದ್ಧ ಕೋಮಲ ಮತ್ತು ತೀವ್ರ ಸ್ವರಗಳನ್ನು ಆಧರಿಸಿವೆ.

ಕೋಮಲ ರಿಷಭ ಹಾಗೂ ಕೋಮಲ ದೈವತವಿದ್ದರಾಗಗಳು ಸಂಧಿ ಪ್ರಕಾಶ ರಾಗಗಳು ಎಂದು ಪರಿಗಣಿಸಲ್ಪಡುತ್ತವೆ. ಸಂಧಿ ಪ್ರಕಾಶ ಸಮಯವು ದಿನದ 24 ಗಂಟೆಗಳ ಸಮಯದಲ್ಲಿ ಎರಡು ಬಾರಿ ಮಾತ್ರ ಬರತ್ತದೆ. ದಿನ ಮತ್ತು ರಾತ್ರಿ, ರಾತ್ರಿ ಮತ್ತು ದಿನಗಳ ಸಂಯೋಗ ಸಮಯವೇ ಸಂಧೀ ಪ್ರಕಾಶ ಕಾಲವಾಗಿದೆ. ಪ್ರಾತಃ ಕಾಲವೆಂದರೆ ಸೂರ್ಯೋದಯ ಹಾಗೂ ಸೂರ್ಯಾಸ್ತಕ್ಕೆ ಮೊದಲು ಬರುವ ಸಮಯ. ದಿನರಾತ್ರಿ ಎಂದು ಹೇಳಲು ಬಾರದ ಪ್ರಕಾಶವೇ ಸಂದೀ ಪ್ರಕಾಶ ಎಂದು ಹೆಸರು. ಸಂಗೀತದಲ್ಲಿ 1)ಪ್ರಾತಃಕಾಲೀನ ಸಂಧೀ ಪ್ರಕಾಶರಾಗಗಳು. 2)ಸಾಯಂಕಾಲೀನ ಸಂಧೀ ಪ್ರಕಾಶ ರಾಗಗಳು ಈ ರೀತಿಯಾಗಿ ಎರಡು ರೀತಿಯ ಸಂಧಿ ಪ್ರಕಾರ ರಾಗಗಳ ವಿಭಜನೆ ಇರುತ್ತದೆ. ಸಂಧಿ ಪ್ರಕಾಶ ರಾಗಗಳಲ್ಲಿ ತೀವ್ರ ಮಧ್ಯಮ ಸ್ವರವು ವಿಶೇಷ ಸ್ಥಾನವನ್ನು ಪಡೆದಿದೆ. ಪ್ರಾತಃಕಾಲೀನ

ಸಂಧಿಪ್ರಕಾಶ ರಾಗಗಳಲ್ಲಿ ಮಧ್ಯಮವು ವಿಶೇಷವಾಗಿ ಕೋಮಲ(ಶುದ್ಧ)ವಾಗಿರುತ್ತದೆ. ಹಾಗೂ ಸಾಯಂಕಾಲೀನ ಸಂಧೀ ಪ್ರಕಾಶದ ರಾಗಗಳಿಲ್ಲಿ ತೀವ್ರ ಮಧ್ಯಮ ಪ್ರಯೋಗವು ಪ್ರಭಾವಶಾಲಿ ಸ್ವರವಾಗಿರುತ್ತದೆ

ಉದಾ: – 1) ಭೈರವ, ಕಾಲಿಂಗಡಾ ರಾಗಗಳಲ್ಲಿ ಶುದ್ಧ ಮಧ್ಯಮ ಪ್ರಯೋಗವಿದ್ದು ಈ ರಾಗಗಳು ಪ್ರಾತಕಾಲೀನ ಸಂಧೀಪ್ರಕಾಶದ ರಾಗಗಳಾಗಿವೆ. ಪೂರ್ವಿ ಹಾಗೂ ಮಾರ್‍ವಾ ರಾಗಗಳಲ್ಲಿ ತೀವ್ರ ಮಧ್ಯಮದ ಪ್ರಯೋಗವಿದ್ದು ಇವು ಸಾಯಂಕಾಲೀನ ಸಂಧೀ ಪ್ರಕಾಶಗಳಾಗಿವೆ. 2) ರಿಷಭ ಹಾಗೂ ದೈವತ ಶುದ್ಧ ಸ್ವರಗಳಿರುವ ರಾಗಗಳು ಬೆಳ್ಳಿಗ್ಗೆ 4 ರಿಂದ 7 ಗಂಟೆ, ರಾಗ ಬಿಲಾವಲ್, ಖಮಾಜ ಮತ್ತು ಕಲ್ಯಾಣ ಥಾಟದ ರಾಗಗಳಲ್ಲಿ – ರೆ,ಧ ಶುದ್ಧವಿರುತ್ತದೆ. ಇನ್ನು ಕೆಲವು ರಾಗಗಳಲ್ಲಿ ಬಿಹಾಗ್, ಯಮನ್, ದೇಶಕಾರ, ಭೂಪಾಲಿ, ಗೌಡಸಾರಂಗ, ಖಮಾಜ, ಬಿಹಾಗ, ಯಮನ, ಕೇದಾರ ಇತ್ಯಾದಿ ರಾಗಗಳಲ್ಲಿ 'ಗ' ಸ್ವರವು ಶುದ್ಧವಾಗಿರುತ್ತದೆ. ಏಕೆಂದರೆ 'ಗ' ಯಾವಾಗಲೂ ಕೋಮಲ ಸ್ವರವಾದರೆ ಆಗ ಗ ನಿ, ಕೋಮಲವಿರುವ ರಾಗಗಳ ಗುಂಪಿಗೆ ಸೇರಿಸಬೇಕಾಗುತ್ತದೆ. ಆದ್ದರಿಂದ ರೆ,ಧ ಶುದ್ಧ ಸ್ವರಗಳಿರುವಾಗ, ರೆ,ಗ ಸ್ವರಗಳು ಶುದ್ಧವಾಗಿರಲೇಬೇಕು. ಗಾಂಧಾರ ಸ್ವರವು ತನ್ನ ಉಚಿತವಾದ ಜಾಗಕ್ಕೆ ಹೋಗುವುದು. ಈ ರಾಗಗಳನ್ನು ಹಾಡುವ ಸಮಯ ಬೆಳ್ಳಿಗ್ಗೆ 7 ಘಂಟೆಯಿಂದ 10 ಗಂಟೆಯವರೆಗೆ, ಅದೇ ರೀತಿ ರಾತ್ರಿ 7 ಗಂಟೆಯಿಂದ 10 ಗಂಟೆವರೆಗೆ ಹಾಡುವ ಸಮಯ. 3) ಮೂರನೇ ವರ್ಗದಲ್ಲಿ ಕೋಮಲ ಗಾಂಧಾರ, ಕೋಮಲ ನಿಷಾದ ಸ್ವರ ಪ್ರಧಾನ ರಾಗಗಳು ಬರುತ್ತವೆ. ಈ ರಾಗಗಳು ದಿನದ 10 ಗಂಟೆಯಿಂದ ಸಾಯಂಕಾಲ 4 ಗಂಟೆಯವರೆಗೆ ಹಾಗೂ ರಾತ್ರಿಯ ಹತ್ತು ಗಂಟೆಯಿಂದ ಬೆಳಗಿನ 4 ಗಂಟೆಯ ಕಾಲಾವಧಿಯಲ್ಲಿ ಹಾಡಲಾಗುತ್ತದೆ. ಈ ರಾಗಗಳಲ್ಲಿ ರಿಷಭ, ದೈವತ ಸ್ವರಗಳು ಶುದ್ಧವಿರಬಹುದು ಅಥವಾ ಕೋಮಲವಾಗಿರಬಹುದು. ಆದರೆ ಗಾಂಧಾರ ಸ್ವರವು ಮಾತ್ರ ಅತ್ಯವಶ್ಯಕವಾಗಿ ಕೋಮಲ ಸ್ವರವಾಗಿರಲೇಬೇಕು. ಈ ವರ್ಗದ ರಾಗಗಳಲ್ಲಿ ಪ್ರಾತಃ ಕಾಲದಲ್ಲಿ ಆಸಾವರಿ, ಜೀವನಪುರಿ, ಗಾಂಧಾರ ತೋಡಿ ಇತ್ಯಾದಿ ರಾಗಗಳು ಬರುತ್ತವೆ. ರಾತ್ರಿಯ ಕಾಲಾವಧಿಯಲ್ಲಿ ಭಾಗ್ಯಶ್ರೀ, ಜೈಜೈವಂತಿ, ಮಾಲಕಂಸ ಮುಂತಾದ ರಾಗಗಳು ಬರುತ್ತವೆ.

ಇಲ್ಲಿ ಯಾವ ಪ್ರಹರದಲ್ಲಿ ಯಾವ ರಾಗವನ್ನು ಹಾಡಬೇಕೆನ್ನುವುದನ್ನು ಕೆಲವು ರಾಗಗಳನ್ನು ನೋಡೋಣ ಬೆಳಗಿನ ಮೊದಲನೇ ಪ್ರಹರ – ಬೆಳಗಿನ 7 ರಿಂದ 9 ಗಂಟೆ – ಬೆಳಗಿನ 7 ಗಂಟೆಗೆ ಬಿಲಾವಲ್ ಥಾಟದ ಬಿಲಾವಲ್, ಅಲ್ಲೈಬಿಲಾವಲ್, ದೇಸಕಾರ, ದೇವಗಿರಿ ಬಿಲಾವಲ, ಗುಣಕಲಿ. 8 ಗಂಟೆಗೆ ಭೈರವಿ ಥಾಟದ ಭೈರವಿ, ಬಿಲಾಸಖಾನಿತೋಡಿ. ಎರಡನೇ ಪ್ರಹರದಲ್ಲಿ – ಬೆಳಗಿನ 9 ರಿಂದ 12 ಗಂಟೆ – 9 ಗಂಟೆಗೆ ತೋಡಿ ಥಾಟದ ತೋಡಿ, ಗುಜರಿ ತೋಡಿ, ಭೂಪಾಲ್ ತೋಡಿ, ಸಾಲಗವರಾಳಿ, 10 ಗಂಟೆಗೆ ಆಸಾವರಿ, ಜೌನಪುರಿ,ದೇಸಿ ಕೋಮಲ್ ರಿಷಭ ಆಸಾವರಿ, ದೇವಗಾಂಧಾರ 11 ಗಂಟೆಗೆ ಗೌಡಸಾರಂಗ,ಬೃಂದಾವನಿ ಸಾರಂಗ, 12 ಗಂಟೆಗೆ ಮಿಯಾಕಿ ಸಾರಂಗ, ಮದಮಾದ ಸಾರಂಗ, ಶುದ್ಧ ಸಾರಂಗ. ಮೂರನೇ ಪ್ರಹರದಲ್ಲಿ – ಭೀಮಪಲಾಸಿ, ಪಟದೀಪ, ಪೀಲೂ ದಾನಿ, ಹಂಸ ಕಿಂಕಿಣಿ. ನಾಲ್ಕನೇ ಪ್ರಹರದಲ್ಲಿ – ಮುಲ್ತಾನಿ, ಮದುವಂತಿ, ಪೂರ್ವಿ, ಶ್ರೀ, ಪೂರಿಯಾ, ಗೌರಿ, ಮಾರವಾ, ಪೂರಿಯಾ ಕಲ್ಯಾಣ.ರಾತ್ರಿಯ ಮೊದಲ ಪ್ರಹರದಲ್ಲಿ – 7 ಗಂಟೆಗೆ ಯಮನ, ಭೂಪಾಲಿ, ಶ್ಯಾಮ ಕಲ್ಯಾಣ, ಕೇದಾರ, ಕಾಮೋದ, ಹಮೀರ, ಮಾರುಬಿಹಾಗ, ಶುದ್ಧಕಲ್ಯಾಣ, ಛಾಯಾ ನಟ, ಬಿಹಾಗ. ರಾತ್ರಿಯ ಎರಡನೇ ಪ್ರಹರದಲ್ಲಿ – ರಾತ್ರಿ 10 ಗಂಟೆಗೆ ದುರ್ಗಾ, ಶಂಕರಾ, ಖಮಾಜ್, ದೇಸ, ತಿಲಕ್ ಕಾಮೋದ, ತಿಲಂಗ ಕಂಬಾವತಿ, ರಾಗೇಶ್ರೀ, ಝಿಂಝೋಟಿ, ಕಲಾವತಿ, ಜೈಜೈವಂತಿ, 12 ಗಂಟೆಗೆ ಕಾಫಿ, ಭಾಗೇಶ್ರೀ, ಬಹಾರ. ರಾತ್ರಿಯ ಮೂರನೇ ಪ್ರಹರ – 1 ಗಂಟೆಗೆ ದರಬಾರಿ ಕಾನಡಾ, ಅಢಾಣ, ಕೌಂಶಿ ಕಾನಡಾ. 3 ಗಂಟೆಗೆ ಬಸಂತ್, ಪರಜ್, ಸೋಹನಿ. ರಾತ್ರಿಯ ನಾಲ್ಕನೇ ಪ್ರಹರ – ಪ್ರಾತರ್ಗೇಯ – 4 ಗಂಟೆಗೆ ಲಲತ, ಭತಿಯಾರ, ಭೈರವ್, 5 ಗಂಟೆಗೆ ರಾಮಕಲಿ, ಜೋಗಿಯಾ, ಕಾಲಿಂಗಡಾ, ಅಹೀರ ಭೈರವ್, ಬಿಬಾಸ್

ಹೀಗೆ ರಾಗಗಳು ಸಮಯಕ್ಕೆ ಸರಿಯಾಗಿ ಸ್ವರಗಳು ಬದಲಾಯಿಸುತ್ತಿರುತ್ತವೆ. ಆದ್ದರಿಂದ ರಾಗಕ್ಕೂ ಸಮಯಕ್ಕು ಅತ್ಯಂತ ನಿಕಟವಾದ ಸಂಬಂಧವಿದೆ. ಹಿಂದೂಸ್ಥಾನಿ ಸಂಗೀತ ಜಗತ್ತಿನಲ್ಲಿ ಸಮಯಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ ಹಾಗೂ ಕಲಾವಿದರು ಸಮಯಕ್ಕೆ ತಕ್ಕ ರಾಗಗಳನ್ನು ಹಾಡುವುದು ಪರಂಪರೆಯಾಗಿ ಉಳಿದು ಬಂದಿದೆ. ಇದು ಹಿಂದೂಸ್ಥಾನಿ ಸಂಗೀತದಲ್ಲಿ ಮಾತ್ರ ಉಳಿದುಕೊಂಡಿದೆ. ಕರ್ನಾಟಕ ಸಂಗೀತ ಗ್ರಂಥಗಳಲ್ಲಿ ಮಾತ್ರ ಸಮಯಕ್ಕೆ ಹಾಗೂ ಋತುಗಳಿಗೆ ಪ್ರಾಮುಖ್ಯತೆ ಇದೆ. ಲಿಖಿತದಲ್ಲಿ ಮಾತ್ರ ಉಳಿದಿದೆ. ಆದರೆ ಅದನ್ನು ಸಂಗೀತಗಾರರು ಪಾಲಿಸುವುದಿಲ್ಲ. ಯಾವುದೇ ರಾಗವನ್ನು ಯಾವುದೇ ಸಮಯದಲ್ಲಿ ಹಾಗೂ ಯಾವುದೇ ಋತುಗಳಲ್ಲಿ ಹಾಡಬಹುದು. ಆದರೆ ಸಮಯಕ್ಕೆ ತಕ್ಕ ರಾಗವನ್ನು ಹಾಡುವುದರಿಂದ ರಾಗದಲ್ಲಿಯ ಭಾವನೆಯು ಶೋತೃಗಳ ಮೇಲೆ ಬೀರುವ ಪರಿಣಾಮವು ಹಿತಕರವಾಗಿರುತ್ತದೆ. ಹೀಗಾಗಿ ಸಂಗೀತವನ್ನು ಸಮಯದಿಂದ ಬೇರ್ಪಡಿಸುವುದು ಅಸಾಧ್ಯ.

ನಮ್ಮ ಪೂರ್ವಜರು ರಾಗಗಳನ್ನು ಸಮಯಕ್ಕೆ ತಕ್ಕ ಹಾಗೆ ವಿಭಜನೆ ಮಾಡಿರುವುದು ಸಮಂಜಸವಾಗಿದೆ. ಪ್ರತಿಯೊಂದು ರಾಗವು ತನ್ನದೆ ಆದ ಸ್ವರಗಳನ್ನು ಹೊಂದಿದ್ದು, ಕೋಮಲ ಸ್ವರಗಳುಳ್ಳ ರಾಗಗಳನ್ನು ಬೆಳಗಿನ ಜಾವ ಹಾಗು ರಾತ್ರಿ ಸಮಯದಲ್ಲಿ ಹಾಡುವ್ವದರಿಂದ ರಾಗವನ್ನು ಪ್ರಸ್ತುತಪಡಿಸುವ ಗಾಯಕರಿಗೂ ಹಾಗು ಶೋತೃಗಳಿಗೂ ಆನಂದ ಉಂಟಾಗುವುದಲ್ಲದೆ ಕಾರ್ಯಕ್ರಮಕ್ಕೆ ಕಳೆಕಟ್ಟುವುದು ನಿಶ್ಚಿತ.

### *ಖಜಜಿಜಡಿಜಟಛಿಜ: ಆಧಾರ ಗ್ರಂಥಗಳು*


1. ಸಂಗೀತ ಶಾಸ್ತ್ರದ ದರ್ಪಣ, ಲೇಖನ ರಾಗಸಮಯ ವಿಭಜನೆ ಲೇಖಕರು ಪ್ರೋ ಎ.ಯು ಪಾಟೀಲ್, ಪ್ರಕಾಶನ.
2. ಸಂಗೀತ ಸಂಜೀವಿನಿ– ಲೇಖಕರು, ಪ್ರೋರಾಹೀರೆಮಠ, ಪ್ರಕಾಶನ–ರಾಸಾಂಚೆ
3. ಹಿಂದೂಸ್ಥಾನಿ ಸಂಗೀತ ಮತ್ತು ಸ್ವರವಾದ್ಯ
4. ರಾಗ ಪರಿಚಯ ಭಾಗ 3 ಲೇಖಕರು–ಪ್ರೋ.ಹರಿಶ್ಚಂದ್ರ ಶಿವಾತ್ಸವ ಪ್ರಕಾಶನ–ಸಂಗೀತ ಸದನ ಇಲಹಾಬಾದ